**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 884/2014**

**ಪಿ.ಡಬ್ಲ್ಯೂ: 33**

**ಸಿ.ಡಬ್ಲ್ಯೂ: 35**

**ಹೆಸರು** : ಕೆ.ಟಿ.ರಮೇಶ್

ತಂದೆಯ **ಹೆಸರು** : ತಮ್ಮಯ್ಯ

**ವಯಸ್ಸು** : **39 ವರ್ಷ**

**ಉದ್ಯೋಗ** : ಪೊಲೀಸ್ ಇನ್ಸಪೆಕ್ಟರ್, ಸಿಐಡಿ,

**ವಾಸಸ್ಥಳ** : ಬೆಂಗಳೂರು

**ದಿನಾಂಕ: 19-04-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ನಾನು ದಿ: ***26-02-2014*** ರಿಂದ ***04-05-2015*** ರವರೆಗೆ ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಪಿ ಎಸ್ ಐ **ಆಗಿ ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕ: 02-03-2014 ರಂದು ಈ ಕೇಸಿನ ಕಡತವನ್ನು ಚಾಸಾ-32 ರವರಿಂದ ಪಡೆದುಕೊಂಡು ದಿನಾಂಕ: 29-08-2014 ರಂದು ಈ ಪ್ರಕರಣದಲ್ಲಿ ಕೈಬರಹದ ತಜ್ಞರಿಗೆ ಕಳುಹಿಸಿದ್ದ ದಾಖಲಾತಿಗಳನ್ನು ಪರಿಶೀಲಿಸಿದ ಬಗ್ಗೆ ವರದಿ ನೀಡಲು ಮನವಿಯೊಂದಿಗೆ ಎಫ್ ಎಸ್ ಎಲ್ ಬೆಂಗಳೂರು ರವರಿಗೆ ಮುಖ್ಯ ಪೇದೆ ನಂ.43 ಚಂದ್ರಶೇಖರ್ ರವರನ್ನು ಕಳುಹಿಸಿದ್ದು, ಅವರು ಎಫ್ ಎಸ್ ಎಲ್ ನಿಂದ ವರದಿ ಮತ್ತು ದಾಖಲಾತಿಗಳನ್ನು ತಂದು ಡಿವೈ ಎಸ್ ಪಿ, ತರೀಕೆರೆ ಉಪ ವಿಭಾಗ ಕಛೇರಿಗೆ ತಂದು ನೀಡಿರುವುದಾಗಿ ಬಂದು ವರದಿ ಮಾಡಿರುತ್ತಾರೆ.

ದಿನಾಂಕ: 03-09-2014 ರಂದು ಡಿ ವೈ ಎಸ್ ಪಿ, ತರೀಕೆರೆ ಉಪ ವಿಭಾಗದವರು ಎಫ್ ಎಸ್ ಎಲ್, ಬೆಂಗಳೂರುರವರಿಂದ ಬಂದ ಕ್ಯೂಡಿ ಸಂಖ್ಯೆ 50/14 ರಲ್ಲಿ ಬಂದ ವರದಿ ಮತ್ತು ನಾವು ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟ ಎಲ್ಲಾ ದಾಖಲಾತಿಗಳನ್ನು ವಾಪಸ್ಸು ಕಳುಹಿಸಿಕೊಟ್ಟಿದ್ದನ್ನು ಸ್ವೀಕರಿಸಿ ಪರಿಶೀಲನೆ

ಮಾಡಲಾಗಿರುತ್ತದೆ. ವರದಿಯಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕ್, ಬಾವಿಕೆರೆಯಲ್ಲಿ ಬಂಗಾರದ ಆಭರಣಗಳನ್ನು ಬ್ಯಾಂಕಿಗೆ ಅಡವಿಟ್ಟು ಸಾಲ ಪಡೆದ ಗ್ರಾಹಕರುಗಳಾದ ಎಸ್.ಉಮೇಶ್, ಎಂ.ಪುಟ್ಟಸ್ವಾಮಿ, ಬಿ.ಮಾಲತಿ, ವಿನೋದಮ್ಮ, ನಿಂಗಪ್ಪ, ಡಿ.ಎಸ್. ಸುರೇಶ. , ಎ. ಕುಮಾರ್ ಮತ್ತು ಕೇಶವಮೂರ್ತಿ ಹಾಗೂ ಬ್ಯಾಂಕ್‌ನ ಅಕ್ಕಸಾಲಿಗರಾದ ರಾಘವೇಂದ್ರ ಹಾಗೂ ಆರೋಪಿ ಎಂ.ಎ.ರವಿನಾರಾಯಣ್ ರವರ ಸಹಿಗಳನ್ನು ತಾಳೆ ಮಾಡಲು ಎಫ್ ಎಸ್ ಎಲ್ ಬೆಂಗಳೂರಿಗೆ ಕಳುಹಿಸಿಕೊಟ್ಟಿದ್ದು, ಇವರ ಸಹಿಗಳನ್ನು ಕೈಬರಹ ತಜ್ಞರು ಪರೀಕ್ಷಿಸಿ ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ.

ಎಸ್.ಉಮೇಶ್, ಎಂ.ಪುಟ್ಟಸ್ವಾಮಿ, ನಿಂಗಪ್ಪ, ಡಿ.ಎಸ್. ಸುರೇಶ. , ಎ. ಕುಮಾರ್ ಮತ್ತು ಕೇಶವಮೂರ್ತಿ ಇವರುಗಳೆಲ್ಲರೂ ಬಂಗಾರದ ಆಭರಣದ ಸಾಲದ ಅರ್ಜಿಗೆ ಹಾಕಿರುವ ಸಹಿಗೂ ಮತ್ತು ಅವರಿಂದ ಪಡೆದ ಕೋರಿಕೆ ಸಹಿಗಳಿಗೂ ತಾಳೆ ನೋಡಿದಾಗ ಹೊಂದಾಣಿಕೆ ಆಗಿರುವುದಾಗಿ ವರದಿಯಲ್ಲಿ ತಿಳಿಸಿರುತ್ತಾರೆ ಹಾಗೂ ಶ್ರೀಮತಿ ಡಿ.ಮಾಲತಿ ಮತ್ತು ವಿನೋದಮ್ಮ ಇವರುಗಳು ಬಂಗಾರದ ಆಭರಣದ ಸಾಲದ ಅರ್ಜಿಗೆ ಹಾಕಿರುವ ಸಹಿಗೂ ಹಾಗೂ ಕೋರಿಕೆಯ ಸಹಿಗೂ ತಾಳೆ ನೋಡಿದಾಗ ಹೊಂದಾಣಿಕೆ ಆಗಿರುವುದಿಲ್ಲ. ಅದು ಎಮೀಷನ್ ಪೋರ್ಜರಿ ಎಂದು ವರದಿ ನೀಡಿರುತ್ತಾರೆ ಮತ್ತು ಅಕ್ಕಸಾಲಿಗ ರಾಘವೇಂದ್ರರವರು ಮೇಲ್ಕಂಡ ಎಲ್ಲಾ ಗ್ರಾಹಕರುಗಳ ಸಾಲದ ಅರ್ಜಿಯಲ್ಲಿ ಬಂಗಾರವನ್ನು ಒರೆ ಹಚ್ಚಿ ನೋಡಿ ಬಂಗಾರವೆಂದು ದೃಢೀಕರಿಸಿದ ಬಗ್ಗೆ ಹಾಕಿರುವ ಸಹಿಗಳನ್ನು ಹಾಗೂ ಕೋರಿಕೆ ಸಹಿಯನ್ನು ತಾಳೆ ಮಾಡಿ ಎಲ್ಲಾ ಅರ್ಜಿಗಳಲ್ಲಿ ಹಾಕಿರುವ ಸಹಿಗಳು ಎಮೀಷನ್ ಪೋರ್ಜರಿ ಎಂದು ವರದಿಯನ್ನು ನೀಡಿರುತ್ತಾರೆ.

ದಿನಾಂಕಃ 01-10-2014 ರಂದು ಪ್ರಾದೇಶಿಕ ವ್ಯವಸ್ಥಾಪಕರು, ಕಾವೇರಿ ಗ್ರಾಮೀಣ ಬ್ಯಾಂಕ್ ಚಿಕ್ಕಮಗಳೂರುರವರಿಗೆ ಸಾಕ್ಷಿದಾರರಾದ ಚಾಸಾ-1, 2, 6 , 9 ಮತ್ತು 17 ಸದರಿರವರಿಗೆ ಸಾಕ್ಷಿ ವಿಚಾರಣೆಗೆ ಬರುವಂತೆ ನೋಟೀಸ್ ಜಾರಿ ಮಾಡಿರುತ್ತೇನೆ.

ದಿನಾಂಕಃ 13-10-2014 ರಂದು ಬಾವಿಕೆರೆ ಕಾವೇರಿ ಗ್ರಾಮೀಣ ಬ್ಯಾಂಕಿಗೆ ಭೇಟಿ ನೀಡಿ ಸಾಕ್ಷಿದಾರರಾದ

ಶ್ರೀಮತಿ ಗಾಯಿತ್ರಿ, ಶಶಿಧರಮೂರ್ತಿ, ಸುರೇಶ್ ಜಕಣಾಚಾರ್, ರವೀಂದ್ರಕುಮಾರ್, ಸತ್ಯನಾರಾಯಣರಾವ್, ಹೆಚ್.ಎಸ್.ಗುರುನಾಥ್, ಬಲರಾಮ್, ಸೀತಾರಾಮ್, ಸಾಯಿ ಕೃಷ್ಣರವರುಗಳನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ.

ದಿನಾಂಕಃ 20-10-2014 ರಂದು ಸಾಕ್ಷಿದಾರರಾದ ಜಿ.ಉಮೇಶ್, ಶ್ರೀಮತಿ ಮಾಲತಿ, ಶ್ರೀಮತಿ ವಿನೋದಮ್ಮ, ಪುಟ್ಟಸ್ವಾಮಿ, ಎಸ್.ಬಿ ಲಿಂಗಪ್ಪ, ಸುರೇಶ್, ಕುಮಾರ್, ಕೇಶವಮೂರ್ತಿ, ರಾಘವೇಂದ್ರರವರನ್ನು ವಿಚಾರಣೆ ಮಾಡಿ ಅವರುಗಳ ಹೇಳಿಕೆಗಳನ್ನು ಪಡೆದಿರುತ್ತೇನೆ.

ಅದೇ ದಿನ ಪ್ರಾದೇಶಿಕ ವ್ಯವಸ್ಥಾಪಕರು, ಕಾವೇರಿ ಗ್ರಾಮೀಣ ಬ್ಯಾಂಕ್, ಚಿಕ್ಕಮಗಳೂರುರವರಿಗೆ ದಿಃ 28-06-2013 ರಂದು ಸತ್ಯನಾರಾಯಣರಾವ್ ರವರು ಪಡೆದ ಗ್ರಾಹಕರ ಹೇಳಿಕೆಗಳನ್ನು ಕಳುಹಿಸಿಕೊಡಲು ಮನವಿಯನ್ನು ಸಲ್ಲಿಸಿರುತ್ತೇನೆ.

ದಿಃ 22-10-2014 ರಂದು ಪ್ರಾದೇಶಿಕ ವ್ಯವಸ್ಥಾಪಕರು, ಕಾವೇರಿ ಗ್ರಾಮೀಣ ಬ್ಯಾಂಕ್, ಚಿಕ್ಕಮಗಳೂರುರವರು ಪಡೆದ ದಾಖಲಾತಿಗಳನ್ನು ಸ್ವೀಕರಿಸಿರುತ್ತೇನೆ ಹಾಗೂ ಈ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿ ವಿರುದ್ದ ಆರೋಪ ಸಾಬೀತಾದ ಕಾರಣ ಆರೋಪಿ ವಿರುದ್ದ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಎಫ್ ಎಸ್ ಎಲ್ ವರದಿಯಾಗಿದ್ದು , ಸದರಿ ದಾಖಲೆಯನ್ನು ಈಗಾಗಲೇ ನಿಪಿ-32 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-32(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ದಿನಾಂಕ 28-06-2013 ರಂದು ರೀಜನಲ್ ಮ್ಯಾನೇಜರ್, ವಲಯ ಕಛೇರಿ, ಕಾವೇರಿ ಗ್ರಾಮೀಣ ಬ್ಯಾಂಕ್ ಐ.ಜಿ. ರಸ್ತೆ, ಚಿಕ್ಕಮಗಳೂರುರವರಿಗೆ

ನೀಡಿದ ಪತ್ರ ಆಗಿದ್ದು, ಸದರಿ ದಾಖಲೆಯನ್ನು ನಿಪಿ-61 ಎಂದು , ಸಾಕ್ಷಿಯ ಸಹಿಯನ್ನು ನಿಪಿ-61(ಎ) ಎಂದು ಗುರುತಿಸಲಾಯಿತು.

***<u>ಪಾಟೀ ಸವಾಲು : ಆರೋಪಿತರ ಪರ ಶ್ರೀ ಎಂ ಕೆ ಟಿ ವಕೀಲರಿಂದ.</u>***

ಈ ಪ್ರಕರಣವನ್ನು ನಾನು ತನಿಖೆ ಮಾಡುವ ಕಾಲದಲ್ಲಿ ಆರೋಪಿಯನ್ನು ಕರೆಸಿ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ. ನಾನು ಪ್ರಕರಣದಲ್ಲಿ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ನಾನು ಆರೋಪಿತನ ವಿರುದ್ದ ಸುಳ್ಳು ದೋಷರೋಪಾಣಾ ಪಟ್ಟಿಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆ</u>: ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

*ಓ. ಕೇ. ಸ. ಇ. ಎ. ಒ.*

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***